KAN 102.3 Reg. No. ..................................

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ

ಅಕ್ಟೋಬರ್/ನವೆಂಬರ್ – 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ, ಕಾವ್ಯಸಂದರ್ಭದಲ್ಲಿ ಆ ಭಾಗದ ಮಹತ್ವವನ್ನು ವಿವರಿಸಿ. **5X1=5**

1) ನೆಲಕಿರಿವೆನೆಂದು ಬಗೆವಿರೆ
ಛಲಕಿಱುವೆಂ ಪಾಂಡುಸುತರೊಳೀ ನೆಲವಿದು ಪಾ
ೞ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವವನೇ

2) ಬೇಕಾದ ಹಣ್ಣಿಹುದು, ಹೂವಿಹುದು ತೌರಿನಲಿ
ಹೊಸ ಸೀರೆ, ರತ್ನದಾಭರಣ;
ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲಿ
ನಿಮಗಿಲ್ಲ ಒಂದು ಹನಿ ಕರುಣ.

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ, ಕಾವ್ಯ ಸಂದರ್ಭದಲ್ಲಿ ಆ ಸಾಲುಗಳ ಸ್ವಾರಸ್ಯವನ್ನು ವಿಶದಪಡಿಸಿ. **3X2=6**

1) ವಿದ್ಯವ ಬಲ್ಲ ಕಡುಜಾಣ ಗಿರಿಯ ಮೇಲಿದ್ದರೂ ಸಲುವ.

2) ಪರನಾರಿಯರ ನೋಟಕೆ ಗುರಿಯ ಮಾಡಿದಿ, ಮನಸೆರೆಯ ಮಾಡಿದಿ

3) ಸಂಜೆ ಬಾನಿನ ತುಂಬ ಹಗಲ ನೆನಪಿನ ಚಿತ್ರ

ಇ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **10X1=10**

1) ದುರ್ಯೋಧನನಿಗೆ ಪಾಂಡವರ ಮೇಲಿದ್ದ ದ್ವೇಷ–ಆಕ್ರೋಶಗಳನ್ನು ಕವಿ ರನ್ನನು ಚಿತ್ರಿಸಿದ ಬಗೆ ಹೇಗೆ? ವಿವರಿಸಿ.

2) 'ಮಬ್ಬಿನಿಂದ ಮಬ್ಬಿಗೆ' ಕವಿತೆಯಲ್ಲಿ ವ್ಯಕ್ತವಾದ ಹುಟ್ಟು–ಸಾವಿನ ನಡುವಣ ಮನುಷ್ಯನ ಏಳು–ಬೀಳುಗಳ ಸ್ವರೂಪವನ್ನು ಕುರಿತು ಬರೆಯಿರಿ.

ಈ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. **7X1=7**

1) 'ಅಪ್ಪ' ಕವಿತೆಯ ಧ್ವನಿ ಮತ್ತು ಆಶಯವನ್ನು ವಿವರಿಸಿ.

2) ಭಕ್ತಿಮಾರ್ಗದ ಬಗೆಗೆ ಕನಕದಾಸರ ಚಿಂತನೆಯೇನು? ವಿವರಿಸಿ.

II. ಅ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **10X1=10**

1) 'ಸಂಸ್ಕೃತಿ' ಕುರಿತ ಡಿ.ವಿ.ಜಿ ಯವರ ಚಿಂತನೆಯನ್ನು ವಿಶ್ಲೇಷಿಸಿ.

2) ಭೂತಾರಾಧನೆಯ ಸಂದರ್ಭದ ನ್ಯಾಯತೀರ್ಮಾನ ಪದ್ಧತಿಯ ಕುರಿತು ಅಮೃತರು ಹೇಗೆ ವಿಶ್ಲೇಷಣೆ ನಡೆಸಿದ್ದಾರೆ? ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. **7X1=7**

2) 'ನಾವು ಕೊಂದ ಹಕ್ಕಿ' ಪ್ರಬಂಧದಲ್ಲಿ ವ್ಯಕ್ತವಾಗುವ ಪರಿಸರ ಪ್ರಜ್ಞೆಯನ್ನು ವಿವರಿಸಿ.

3) ಭೂತಾರಾಧನೆಯಲ್ಲಿ ನ್ಯಾಯಪದ್ಧತಿಯು ಕಾನೂನಿನ ಪರಿಧಿಯನ್ನು ಮೀರಿ ಮಾನವೀಯ ಸ್ಪಂದನ ಸಹಿತವಾಗಿರುವುದನ್ನು ಅಮೃತ ಸೋಮೇಶ್ವರರು ಗುರುತಿಸಿದ ಬಗೆ ಹೇಗೆ?

III. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. 6X1=6

1) ಆಧುನಿಕ ಕಾಲದಲ್ಲಿ ಜಾಹೀರಾತಿನ ಪ್ರಾಮುಖ್ಯತೆಯನ್ನು ಚರ್ಚಿಸಿರಿ.

2) ಅಂತರ್ಜಾಲದಲ್ಲಿ ಕನ್ನಡ ಬಳಕೆಯ ಬಗ್ಗೆ ಪ್ರಬಂಧ ಬರೆಯಿರಿ.

ಆ) ಯಾವುದಾದರೂ ಒಂದಕ್ಕೆ ಟಿಪ್ಪಣಿ ರಚಿಸಿ. 3X1=3

1) ಭಿತ್ತಿ ಪತ್ರ 2) ಕರಪತ್ರ

IV. ಅ) ಒಂದು ಪ್ರಶ್ನೆಗೆ ವಿವರಾಗಿ ಉತ್ತರಿಸಿ. 10X1=10

1) ಹುಲಿ ಜೋಯಿಸರ ವ್ಯಕ್ತಿತ್ವದ ವೈಚಿತ್ರ್ಯಗಳ ಚಿತ್ರಣದ ಕುರಿತು ವಿಶ್ಲೇಷಿಸಿ.

2) 'ಧನಿಯರ ಸತ್ಯನಾರಾಯಣ' ಕಥೆಯ ಆಶಯವನ್ನು ನಿರೂಪಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. 5X1=5

1) ಬೆಳ್ಳಪ್ಪಜ್ಜನ ವ್ಯಕ್ತಿತ್ವವನ್ನು ಪರಿಚಯಿಸಿ.

2) 'ಕಿವುಡ ನಾಯಿಯಾದ ಪ್ರಸಂಗ' ಕತೆಯಲ್ಲಿ ಬಡತನದ ದಾರುಣತೆಯನ್ನು ಹೇಗೆ ಚಿತ್ರಿಸಲಾಗಿದೆ?

V. ಅ) ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ. 3X2=6

1) ಸರ್ವಜ್ಞ 2) ಕವಿಕಂಡ ಬಳೆಗಾರ 3) ಅಂಧನೃಪತಿ

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 1X5=5

1) ಕನಕದಾಸರ ಕೀರ್ತನೆಗಳ ಅಂಕಿತವೇನು?

2) 'ಪ್ರೇಮಕವಿ' ಎಂಬ ಹೆಗ್ಗಳಿಕೆಗೆ ಪಾತ್ರರಾದ ಕನ್ನಡದ ಕವಿ ಯಾರು?

3) ರನ್ನ ಕವಿಯ ಜನ್ಮಸ್ಥಳ ಯಾವುದು?

4) ಕುಸುಮಾ ಶಾನುಭಾಗ ಅವರು ಬರೆದ ಸಣ್ಣಕತೆಯ ಹೆಸರೇನು?

5) ಕರಪತ್ರಕ್ಕೆ ಇಂಗ್ಲೀಷಿನಲ್ಲಿ ಸಂವಾದಿಯಾಗಿ ಬಳಸುವ ಪದ ಯಾವುದು?

**********

KAN 102.3 Reg. No. ..................................

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ

ಅಕ್ಟೋಬರ್ 2013

ಕನ್ನಡ ಭಾಷಾ ಪತ್ರಿಕೆ – I

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗದ ಸಂದರ್ಭ ಸ್ವಾರಸ್ಯವನ್ನು ವಿವರಿಸಿ: 1x5=5

1) ನೆಲಕಿಱುವೆನೆಂದು ಬಗೆವಿರೆ
ಛಲಕಿಱುವೆಂ ಪಾಂಡುಸುತರೊಳೀ ನೆಲನಿದು ಪಾ
ೞ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ

2) ಬೇಕಾದ ಹಣ್ಣಿಹುದು, ಹೂವಿಹುದು ತೌರಿನಲಿ
ಹೊಸಸೀರೆ, ರತ್ನದಾಭರಣ;
ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲಿ
ನಿಮಗಿಲ್ಲ ಒಂದು ಹನಿ ಕರುಣ

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಕಾವ್ಯ ಸಂದರ್ಭದಲ್ಲಿ ಆ ಸಾಲುಗಳ ಸ್ವಾರಸ್ಯವನ್ನು ತಿಳಿಸಿ: 2x3=6

1) ಧನಕನಕ ಉಳ್ಳನಕ ದಿನಕರನಂತಿಕ್ಕು
2) ಪರಮಯೋಗಿಗಮಿಂತುಟು ಮೋಹಮಾಗದೇ?
3) ಸೂರ್ಯನಿಗೂ ಇವನಿಗೂ ಬಿಡಿಸಲಾಗದ ನಂಟು-ಗಂಟು

ಇ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ: 1x10=10

1) 'ಅಪ್ಪ' ಕವಿತೆಯ ಧ್ವನಿ ಮತ್ತು ಆಶಯವನ್ನು ವಿವರಿಸಿ.
2) ಸರ್ವಜ್ಞನ ವಚನಗಳಲ್ಲಿ ಪ್ರಕಟವಾಗುವ ಮೌಲ್ಯಗಳನ್ನು ವಿಶ್ಲೇಷಿಸಿ.

ಈ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: 1x7=7

1) 'ಮಬ್ಬಿನಿಂದ ಮಬ್ಬಿಗೆ' ಕವಿತೆಯಲ್ಲಿ ಶೈಶವಾವಸ್ಥೆ.
2) ರನ್ನನ ಕಾವ್ಯಭಾಗದ ಭೀಷ್ಮನ ಪಾತ್ರದ ವೈಶಿಷ್ಟ್ಯ

II. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿರಿ: 1x10=10

1) 'ಸಂಸ್ಕೃತಿ' ಕುರಿತ ಡಿ.ವಿ.ಜಿಯವರ ಅಭಿಪ್ರಾಯಗಳನ್ನು ನಿರೂಪಿಸಿ.
2) 'ನಾವು ಕೊಂದ ಹಕ್ಕಿ' ಲೇಖನದ ಸಂದೇಶವೇನು? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: 1x7=7

1) ಭೂತಾರಾಧನೆಯಲ್ಲಿ ಸಾಮಾಜಿಕ ಸ್ವಾಸ್ಥ್ಯ ವ್ಯಕ್ತವಾಗುತ್ತದೆಯೆ? ವಿವರಿಸಿ.
2) ನಾವು ಕೊಂದ ಹಕ್ಕಿ ಲೇಖನದಲ್ಲಿ ಮೂಡಿ ಬಂದ ಪರಿಸರ ಸಂಬಂಧಿ ವಿಚಾರಗಳನ್ನು ಚಿತ್ರಿಸಿ.

III. ಅ) ಒಂದು ಪ್ರಶ್ನೆಗೆ ದೀರ್ಘವಾಗಿ ಉತ್ತರಿಸಿ: 1x10=10

1) ಹುಲಿಜೋಯಿಸರ ವ್ಯಕ್ತಿತ್ವದ ವೈಚಿತ್ರ್ಯಗಳ ಚಿತ್ರಣದ ಕುರಿತು ವಿಶ್ಲೇಷಿಸಿ.
2) 'ಧನಿಯರ ಸತ್ಯನಾರಾಯಣ' ಕತೆಯ ಆಶಯವನ್ನು ಸ್ಪಷ್ಟಪಡಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 1x5=5

1) ಬೆಳ್ಳಪ್ಪಜ್ಜನ ವ್ಯಕ್ತಿತ್ವವನ್ನು ಚಿತ್ರಿಸಿ.
2) 'ಕಿವುಡ ನಾಯಿಯಾದ ಪ್ರಸಂಗ' ಕಥೆಯಲ್ಲಿ ಚಿತ್ರಿತವಾದ ಬಡವನ ಹಸಿವು ಹಾಗೂ ಸಾಂಸಾರಿಕ ಸಮಸ್ಯೆಗಳ ಕುರಿತು ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ: 1x6=6

1) ಪತ್ರಿಕೆಗಳಲ್ಲಿನ ಜಾಹಿರಾತು ಕುರಿತು ವಿವರಿಸಿ.
2) ಕರಪತ್ರ ಎಂದರೇನು? ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: 1x3=3

1) ಭಿತ್ತಿಪತ್ರಗಳು ಎಂದರೇನು?
2) ಪ್ರದರ್ಶಕ ಜಾಹೀರಾತುಗಳು ಎಂದರೇನು?

V. ಅ) ಯಾವುದಾದರೂ ಎರಡರ ಕುರಿತು ಟಿಪ್ಪಣಿ ಬರೆಯಿರಿ: 2x3=6

1) ಡಿ.ವಿ.ಜಿ.
2) ಅಂಧನೃಪತಿ
3) ಪೂರ್ಣಚಂದ್ರ ತೇಜಸ್ವಿ

ಆ) ಒಂದು ವಾಕ್ಯ ಅಥವಾ ಒಂದು ಪದದಲ್ಲಿ ಉತ್ತರಿಸಿ: 5x1=5

1) ಕನ್ನಡದ ಮೊದಲ ಪತ್ರಿಕೆ ಯಾವುದು?
2) 'ಪತ್ತೇರಿ ಕೂಟ' ಎಂದರೇನು?
3) 'ತೆರೆದ ಬಾಗಿಲು' ಕವನ ಸಂಕಲನದ ಕರ್ತೃ ಯಾರು?
4) 'ಕನ್ನಡದ ಪ್ರೇಮಕವಿ' ಎಂಬ ಹೆಗ್ಗಳಿಗೆ ಪಾತ್ರರಾಗಿರುವ ಕವಿ ಯಾರು?
5) 'ಸಾಹಸಭೀಮವಿಜಯಂ' ಕೃತಿಯ ಕರ್ತೃ ಯಾರು?

**********

(13)

KAN 103.3

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

I **(ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** 5

(1) ನಾನಲಾ ದ್ರೌಪದಿಯ ಮದುವೆಯೊ
ಳಾ ನರೇಂದ್ರರ ಗೆಲಿದವನು ಬಳಿ
ಕಾ ನಿಳಿಂಪ ವ್ರಜವ ಮುರಿದುರುಪಿದೆನು ಖಾಂಡವವ
ಏನನೆಂಬೆನು ಸಕಲ ಕೌರವ
ಸೇನೆಯನು ಗೋಗ್ರಹಣದಲಿ ಸಲೆ
ನಾನಲೇ ರಥವೊಂದರಿಂದವೆ ಗೆಲಿದೆ ದಿಟವೆಂದ

(2) ಇಂದು ಬಾಳಿದು ಕೂಳ ಕಾಳಗವು, ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ

**ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) ಲೋಗರ ಹಳಿವುದೇ ವಧೆ, ಶಸ್ತ್ರವಧೆ ವಧೆಯಲ್ಲ.

(2) ಉಪವಾಸದಲ್ಲೂ ನಮ್ಮದು ಹಂಗಿಲ್ಲದ ಅಂಗಳ

(3) ಪತಿಯನಿತ್ತಳು ಕೊಡುಗೆ ದೇವನಡಿಗೆ

**ಇ) ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಧರ್ಮರಾಯನು ಅರಣ್ಯದ ಕಡೆಗೆ ಸಂಚಾರ ಕೈಗೊಳ್ಳಲು ಕಾರಣನಾದ ಸಂದರ್ಭ ಯಾವುದು? ವಿಷದ ಪಡಿಸಿ.

(2) ವರ್ತಮಾನ ಭಾರತದ ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು 'ಅಗ್ನಿಪರ್ವ' ಕವಿತೆಯಲ್ಲಿ ಕವಿ ಹೇಗೆ ಟೀಕಿಸಿದ್ದಾರೆ? ವಿವರಿಸಿರಿ.

**ಈ) ಒಂದು ಪ್ರಶ್ನೆಗೆ ಉತ್ತರಿಸಿರಿ** 7

(1) ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ತನಗೆದುರಾಗುವ ಆತಂಕಗಳನ್ನು ಮೆಟ್ಟಿ ಮುನ್ನಡೆಯುವ ರೀತಿ 'ಎಚ್ಚರ' ಕವನದಲ್ಲಿ ಹೇಗೆ ಚಿತ್ರಿಸಲಾಗಿದೆ?

(2) ದಲಿತ ಬದುಕಿನ ದಾರುಣತೆ 'ಹಂಗಿಲ್ಲದ ಅಂಗಳ' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ?

II **ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಕಷ್ಟ ಬಂದಾಗ ಬಾಗದೆ, ಬಾಳಿ ತೋರಿಸಬೇಕು ಎನ್ನುವ ಮಾತನ್ನು ಪಟ್ರೇಸಿಯಾಳ ಬದುಕಿನ ಹಿನ್ನೆಲೆಯಲ್ಲಿ ವಿವರಿಸಿರಿ.

(2) ಬುಲ್‌ಡೋಜರ್ ನಿಂದ ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ಕುರಿತು ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ 7

(1) ವೈಚಾರಿಕತೆಯ ಬಗೆಗೆ ಎಚ್. ನರಸಿಂಹಯ್ಯನವರ ನಿಲುವುಗಳೇನು?

(2) ಸಮಾಜದಲ್ಲಿ ಜಾತಿಗಿಂತ ಮಾನವೀಯ ಮೌಲ್ಯಗಳು ಮುಖ್ಯ ಎನ್ನುವುದು 'ಚಮರಿ' ಲೇಖನದಲ್ಲಿ ಹೇಗೆ ನಿರೂಪಿತವಾಗಿದೆ?

III ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 10

(1) ರಂಗಪ್ಪನ ಹಸಿವಿನ ಬವಣೆಯ ಅಲೆದಾಟ ಹಾಗೂ ಅದರ ಪರಿಣಾಮಗಳನ್ನು ಕುರಿತು ವಿಶ್ಲೇಷಿಸಿರಿ.

(2) ಮಾನವೀಯತೆ ಇಲ್ಲದ ಸಮಾಜದ ವಿಡಂಬನೆ 'ಕೊನೆಯ ಗಿರಾಕಿ' ಕಥೆ ಹೇಗೆ ಅನಾವರಣಗೊಳಿಸುತ್ತದೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) 'ಮೋಚಿ' ಕಥೆಯಲ್ಲಿ ವ್ಯಕ್ತವಾಗುವ ರಾಚನ ನಿಸ್ವಾರ್ಥ ಬದುಕನ್ನು ಕುರಿತು ಬರೆಯಿರಿ.

(2) 'ಒಂದು ಒಸಗೆ ಒಯ್ಯುವುದಿತ್ತು' ಕಥೆಯ ಆಶಯವೇನು?

IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 6

(1) ಮಾರುಕಟ್ಟೆ ನಿರ್ವಹಣೆಯಲ್ಲಿ ಜಾಹೀರಾತುಗಳು ವಹಿಸುವ ಪಾತ್ರವನ್ನು ವಿವರಿಸಿರಿ.

(2) ವಾಣಿಜ್ಯ ಪತ್ರದ ಅಂಗಗಳು ಯಾವುವು? ವಿವರಿಸಿರಿ.

V ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ. 6

(1) ಜಿ.ಎಸ್. ಶಿವರುದ್ರಪ್ಪ

(2) ಪುರಂದರದಾಸ

(3) ಕುಮಾರವ್ಯಾಸ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ 6

(1) ಮಾದ್ರೇಯರು ಎಂದರೆ ಯಾರು?

(2) ಕುಮಾರವ್ಯಾಸನ ಕಾವ್ಯ ಯಾವುದು?

(3) 'ನಿರಂಜನ'ರ ನಿಜ ನಾಮವೇನು?

(4) 'ಭೂಮಿಗೀತ'ದ ಕವಿ ಯಾರು?

(5) ಆಧ್ಯಕ್ಷರ ಎಂದರೇನು?

(6) 'ನಿತ್ಯೋತ್ಸವ'ದ ಕವಿ ಯಾರು?

*****

KAN 103.3

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ – ಅಕ್ಟೋಬರ್ 2015

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ ಅಂಕಗಳು: 80

I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ 5

(1) ಜವನ ಮೀಸೆಯ ಮುರಿದನೋ ಭೈ
ರವನ ದಾಡೆಯನಲುಗಿದನೋ ಮೃ
ತ್ಯುವಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೋ
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಿರುದ ಕೆದರಿದನು

(2) ನತ್ತು ಕೊಟ್ಟಳು ಹರಿಗೆ, ಅತ್ತು ಬಿಟ್ಟಳು ಮರೆಗೆ
ಪತಿಯನಿತ್ತಳು ಕೊಡುಗೆ ದೇವನಡಿಗೆ,
ಹೆಣ್ಣುಮಾಯೆಯ ನೆರಳೆ? ಹೆಣ್ಣು ಗಂಡಿನ ಮರುಳೆ?
ಹೇಳಲೆದೆ ಉಂಟೇನು ಹಾಗಿವಳಿಗೆ?

ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ 6

(1) ಎಲ್ಲೆ ಎಲ್ಲವ ದಾಟಿ ನಡೆಯುತ್ತಾಳೆ ನಿರಂತರ

(2) ಉಪವಾಸದಲ್ಲೂ ನಮ್ಮದು ಹಂಗಿಲ್ಲದ ಅಂಗಳ

(3) ಕಟ್ಟುವೆವು ನಾವು ಹೊಸ ನಾಡೊಂದನು

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 10

(1) ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಉತ್ತರಕುಮಾರನ ಪಾತ್ರವನ್ನು ಹೇಗೆ ಚಿತ್ರಿಸಿದ್ದಾನೆ? ವಿವರಿಸಿರಿ.

(2) ಹೊಸ ಸಮಾಜ ಸೃಷ್ಟಿಯಾಗಬೇಕೆನ್ನುವ ಕವಿಯ ಆಶಯವು 'ಕಟ್ಟುವೆವು ನಾವು' ಕಾವ್ಯಭಾಗದಲ್ಲಿ ಹೆಗೆ ವ್ಯಕ್ತವಾಗಿದೆ? ವಿವರಿಸಿರಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) ಪುರಂದರದಾಸರ ಬದುಕು ಮತ್ತು ಭಕ್ತಿಯನ್ನು ಕವಿ ಕೆ.ಎಸ್. ನಿಸಾರ್ ಅಹಮದ್ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

(2) 'ಹಂಗಿಲ್ಲದ ಅಂಗಳ' ಕವಿತೆಯ ಆಶಯವನ್ನು ವಿವರಿಸಿರಿ.

II ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 10

(1) 'ಜಾತಿಗಿಂತ ಮಾನವೀಯ ಮೌಲ್ಯಗಳು ಮುಖ್ಯ' – ಎಂಬುದನ್ನು 'ಚಮರಿ' ಪ್ರಬಂಧವು ಹೇಗೆ ಚಿತ್ರಿಸಿದೆ? ವಿವರಿಸಿರಿ.

(2) ಪೆಟ್ರಿಸಿಯಾಳ ಬದುಕಿನ ಯಶೋಗಾಥೆಯು ಎ.ಆರ್. ಮಣಿಕಾಂತ್‌ರ ಪ್ರಬಂಧದಲ್ಲಿ ಬಿಂಬಿತವಾದ ಬಗೆ ಹೇಗೆ? ವಿವರಿಸಿರಿ.

(1402) 14/10

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) ಬುಲ್‌ಡೋಜರ್ ಸಂಸ್ಕೃತಿಯು ಪ್ರಕೃತಿಯನ್ನು ಹೇಗೆ ವಿಕೃತಿಯನ್ನಾಗಿಸುತ್ತದೆ? ವಿವರಿಸಿರಿ.

(2) ವೈಚಾರಿಕತೆ ಪ್ರಬಂಧದ ಆಶಯವೇನು? ವಿವರಿಸಿರಿ.

III ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 10

(1) ಸಮಾಜದಲ್ಲಿನ ತಾರತಮ್ಯವನ್ನು 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕಥೆ ಹೇಗೆ ಚಿತ್ರಿಸುತ್ತದೆ? ವಿವರಿಸಿರಿ.

(2) ಜಲಜ ಚಿಕ್ಕಿಯ ಬದುಕಿನ ವಿವರಗಳನ್ನು 'ಒಂದು ಒಸಗೆ ಒಯ್ಯುವುದಿತ್ತು' ಕಥೆ ಹೇಗೆ ಕಟ್ಟಿಕೊಡುತ್ತದೆ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) ಮಾನವೀಯತೆಯಿಲ್ಲದ ಸಮಾಜದ ಶೋಷಣೆಯ ಪ್ರವೃತ್ತಿಯನ್ನು 'ಕೊನೆಯ ಗಿರಾಕಿ' ಕಥೆಯಲ್ಲಿ ನಿರಂಜನರು ಚಿತ್ರಿಸಿದ ಬಗೆ ಹೇಗೆ?

(2) 'ಮೋಚಿ' ಕಥೆಯ ಆಶಯವನ್ನು ವಿವರಿಸಿರಿ.

IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 6

(1) ಜಾಹೀರಾತುಗಳ ಉದ್ದೇಶ ಮತ್ತು ಮಾರುಕಟ್ಟೆ ನಿರ್ವಹಣೆಯಲ್ಲಿ ಅವುಗಳ ಪಾತ್ರವನ್ನು ವಿವರಿಸಿರಿ.

(2) ವಾಣಿಜ್ಯ ಪತ್ರದ ಅಂಗಗಳು ಯಾವುವು? ಉದಾಹರಣೆಯೊಂದಿಗೆ ವಿವರಿಸಿರಿ.

V ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ. 6

(1) ಕುಮಾರವ್ಯಾಸ

(2) ಎಚ್. ನರಸಿಂಹಯ್ಯ

(3) ನಿರಂಜನ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ 6

(1) ಡಾ. ಜಿ. ಎಸ್. ಶಿವರುದ್ರಪ್ಪನವರ ಹುಟ್ಟೂರು ಯಾವುದು?

(2) 'ಎಚ್ಚರ' ಯಾರು ಬರೆದ ಕವನ?

(3) 'ನನ್ನ ಪ್ರೀತಿಯ ಭಾರತ'ದ ಮೂಲ ಲೇಖಕರು ಯಾರು?

(4) 'ಇರುವುದೊಂದೆ ಭೂಮಿ' ಯಾರ ಕೃತಿ?

(5) 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಯಾರ ಕೃತಿ?

(6) ಕುಳಕುಂದ ಶಿವರಾಯರ ಕಾವ್ಯನಾಮ ಯಾವುದು?

*****

KAN 103.3

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ – ಅಕ್ಟೋಬರ್ 2016**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

I (ಅ) **ಕೆಳಗಿನ ಪದ್ಯ ಭಾಗವೊಂದರ ಸಂದರ್ಭ, ಸ್ವಾರಸ್ಯವನ್ನು ವಿವರಿಸಿ** 5X1=5

(1) ಜವನ ಮೀಸೆಯ ಮುರಿದೆನೋ ಭೈ
ರವನ ದಾಡೆಯನಲುಗಿದನೊ ಮೃ
ತ್ಯುವಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೊ
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಿರುದ ಕೆದರಿದನು.

(2) ನಮ್ಮೆದೆಯ ಕನಸುಗಳ ಕಾಮಧೇನು
ಆದಾವು, ಕರೆದಾವು ವಾಂಛಿತವನು;
ಕರೆವ ಕೈಗಿಹುದಿದೋ ಕಣಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ!

ಆ) **ಕೆಳಗಿನ ಪದ್ಯದ ಸಾಲುಗಳಲ್ಲಿ ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 3X2=6

(1) 'ನತ್ತು ಕೊಟ್ಟಳು ಹರಿಗೆ, ಅತ್ತುಬಿಟ್ಟಳು ಮರೆಗೆ'

(2) 'ಎಲ್ಲೆಎಲ್ಲವ ದಾಟಿ ನಡೆಯುತ್ತಾಳೆ ನಿರಂತರ'

(3) 'ಕುಟ್ಟಿ ಪುಡಿ ಮಾಡುವೆವು ಕೋಟೆಗಳನು'

ಇ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 10X1=10

(1) ಉತ್ತರನ ಪೌರುಷದ ಸ್ವಾರಸ್ಯವನ್ನು ನಿರೂಪಿಸಿ.

(2) 'ವರ್ತಮಾನ ಭಾರತದ ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಕಟುವಾಗಿ ವಿಮರ್ಶೆಗೊಡ್ಡುವ ಕವಿತೆ – ಅಗ್ನಿಪರ್ವ' ಈ ಮಾತನ್ನು ಸ್ಪಷ್ಟಪಡಿಸಿ.

ಈ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 7X1=7

(1) 'ಎಚ್ಚರ' ಕವನದ ಆಶಯವನ್ನು ವಿವರಿಸಿ.

(2) ದಲಿತ ಲೋಕದ ಬದುಕಿನ ದಾರುಣತೆ 'ಹಂಗಿಲ್ಲದ ಅಂಗಳ' ಕವನದಲ್ಲಿ ಪ್ರಕಟಗೊಂಡ ಬಗೆ ಹೇಗೆ?

II ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 10X1=10

(1) ಅಭಿವೃದ್ಧಿಯ ಜೊತೆಗೆ ಪರಿಸರ ಸಂರಕ್ಷಣೆಯೂ ಅಗತ್ಯ ಎಂಬುದನ್ನು ನಾಗೇಶ ಹೆಗಡೆಯವರ ಲೇಖನ ಹೇಗೆ ಅರ್ಥೈಸುತ್ತದೆ? ವಿವರಿಸಿ.

(2) ವೈಚಾರಿಕತೆ ಕುರಿತ ಎಚ್. ನರಸಿಂಹಯ್ಯನವರ ಅಭಿಪ್ರಾಯಗಳನ್ನು ನಿರೂಪಿಸಿ.

ಆ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) ಸಮಾಜದಲ್ಲಿ ಜಾತಿಗಿಂತ ಮಾನವೀಯ ಮೌಲ್ಯಗಳು ಮುಖ್ಯ ಎಂಬುದನ್ನು 'ಚಮರಿ' ಲೇಖನವು ಹೇಗೆ ಸ್ಪಷ್ಟಪಡಿಸುತ್ತದೆ? ವಿವರಿಸಿ.

(2) ಪೆಟ್ರೀಶಿಯಾಳ ಬದುಕಿನ ಯಶೋಗಾಥೆಯನ್ನು ವಿವರಿಸಿ.

**III** ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **10X1=10**

(1) 'ಮೋಚಿ' ಕಥೆಯ ಆಶಯವನ್ನು ವಿವರಿಸಿ.

(2) ಸಮಾಜದ ಶೋಷಣೆಯ ಪ್ರವೃತ್ತಿಯ ಚಿತ್ರಣ 'ಕೊನೆಯ ಗಿರಾಕಿ' ಕತೆಯಲ್ಲಿ ಮೂಡಿ ಬಂದ ಬಗೆ ಹೇಗೆ? ವಿವರಿಸಿ.

ಆ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) ರಂಗಪ್ಪನ ಬದುಕಿನ ಅಲೆದಾಟವನ್ನು ಚಿತ್ರಿಸಿ.

(2) ಜಲಜ ಚಿಕ್ಕಿಯ ವ್ಯಕ್ತಿತ್ವ ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

**IV** ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **6X1=6**

(1) ಜಾಹೀರಾತುಗಳ ಉದ್ದೇಶ ಮತ್ತು ಪಾತ್ರವನ್ನು ವಿವರಿಸಿ.

(2) ವಾಣಿಜ್ಯ ಪತ್ರದ ಮಾದರಿಯೊಂದನ್ನು ಉದಾಹರಣೆಯೊಂದಿಗೆ ವಿವರಿಸಿ.

**V** ಅ) **ಕೆಳಗಿನ ಪ್ರಶ್ನೆಗಳಲ್ಲಿ ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **3X2=6**

(1) ಕುಮಾರವ್ಯಾಸ

(2) ಡಾ. ಎಚ್. ನರಸಿಂಹಯ್ಯ

(3) ನಿರಂಜನ

ಆ) **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ/ಪದದಲ್ಲಿ ಉತ್ತರಿಸಿರಿ** **6X1=6**

(1) 'ಪ್ರೀತಿ ಇಲ್ಲದ ಮೇಲೆ' ಕೃತಿಯ ಕರ್ತೃ ಯಾರು?

(2) 'ಭೂಮಿಗೀತ' ಕವನ ಸಂಕಲನ ಯಾರದ್ದು?

(3) 'ಒಡಲಾಳ' ಕಾದಂಬರಿಯ ಕರ್ತೃ ಯಾರು?

(4) 'ನಿತ್ಯೋತ್ಸವ'ದ ಕವಿ ಯಾರು?

(5) 'ಒಳ ವಿಳಾಸ' ಎಂದರೇನು?

(6) ಕುಮಾರವ್ಯಾಸನ ನಿಜನಾಮವೇನು?

*****